**ಅಧಿಕ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ ನ್ಯಾಯಾಲಯ, ಗುಬ್ಬಿ**

**ಓ ಎಸ್ ನಂ. 72/2017 ಡಿ.ಡಬ್ಲು: 1**

**ದಿನಾಂಕ:09.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು: 4 ನೇ ಪ್ರತಿವಾದಿ ಪರ ಶ್ರೀ.ಹೆಚ್.ಬಿ.ಜಿ.ಕೆ. ವಕೀಲರಿಂದ:**

1 ನೇ ಪ್ರತಿವಾದಿ ನನ್ನ ತಂದೆ. ವಾದಿ ನನ್ನ ತಮ್ಮ. 3 ಮತ್ತು 4 ನೇ ಪ್ರತಿವಾದಿಗಳು ನನ್ನ ತಂಗಿಯರು. ನಾನು, ವಾದಿ, 3 ಮತ್ತು 4 ನೇ ಪ್ರತಿವಾದಿಗಳು 1 ನೇ ಪ್ರತಿವಾದಿಯ ಮಕ್ಕಳು ಎಂದರೆ ಸರಿ . ನಾವೆಲ್ಲರೂ ಒಟ್ಟು ಕುಟುಂಬದ ಸದಸ್ಯರು ಎಂದರೆ ಸರಿಯಲ್ಲ. ವಾದಿ ಸ.ನಂ: 27 ಕ್ಕೆ ಸಂಬಂದಿಸಿದಂತೆ ಪ್ರಸ್ತುತ ದಾವೆಯನ್ನು ಸಲ್ಲಿಸಿರುತ್ತಾರೆ. ದಾವಾಸ್ವತ್ತು ಮೂಲತಃ 1 ನೇ ಪ್ರತಿವಾದಿಗೆ ಸೇರಿದ್ದು. 1 ನೇ ಪ್ರತಿವಾದಿಯ ತಂದೆ ರಂಗಪ್ಪರವರು ದಾವಾಸ್ವತ್ತನ್ನು ಕ್ರಯ ಮತ್ತು ಹಕ್ಕು ಖುಲಾಸೆಯ ಮುಖಾಂತರ 1 ನೇ ಪ್ರತಿವಾದಿಯ ಹೆಸರಿಗೆ ಬರೆದಿರುತ್ತಾರೆ. ದಾವಾಸ್ವತ್ತು ಹಕ್ಕು ನಿವೃತ್ತಿ ಪತ್ರದ ಮುಖಾಂತರ 1 ನೇ ಪ್ರತಿವಾದಿಯ ಹೆಸರಿಗೆ ಬಂದಿರುತ್ತದೆ ಎಂದರೆ ಸರಿ . ದಾವಾಸ್ವತ್ತು ಮೂಲತಃ ನನ್ನ ತಾತ ರಂಗಪ್ಪರವರಿಗೆ ಸೇರಿದ್ದು ಎಂದರೆ ಸರಿ . ಪ್ರಸ್ತುತ ದಾವೆಯನ್ನು ಸಲ್ಲಿಸಿದಾಗ ದಾವಾಸ್ವತ್ತಿನ ಬೆಲೆ 1 ಗುಂಟೆಗೆ ಸುಮಾರು ರೂ.75,000/- ದಿಂದ ರೂ.80,000/- ರೂಗಳ ಮೌಲ್ಯ ಇತ್ತು. ನನ್ನ ಲಿಖಿತ ತಕರಾರು ಸಲ್ಲಿಸುವಾಗ ದಾವಾಸ್ವತ್ತಿನ ಮೌಲ್ಯ ಎಷ್ಟು ಬರೆಸಿರುತ್ತೇನೆ ಎಂದು ನನಗೆ ನೆನಪಿಲ್ಲ. ನನ್ನ ಲಿಖಿತ ತಕರಾರು ಸಲ್ಲಿಸುವ ಕಾಲಕ್ಕೆ ಸಂಬಂದಪಟ್ಟ ಇಲಾಖೆಯಿಂದ ದಾವಾಸ್ವತ್ತಿನ ಮೌಲ್ಯವನ್ನು ತಿಳಿದುಕೊಳ್ಳದೇ ಸರಿಯಾಗಿ ಅದರ ಮೌಲ್ಯವನ್ನು ಬರೆಸಿರುವುದಿಲ್ಲ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ . ಆದ್ದರಿಂದ ನನ್ನ ಲಿಖಿತ ತಕರಾರಿನಲ್ಲಿ ನಮೂದಿಸಿರುವ ದಾವಾಸ್ವತ್ತಿನ ಮೌಲ್ಯ ನನಗೆ ಹೇಳಲಾಗುತ್ತಿಲ್ಲ ಎಂದರೆ ನನಗೆ ನೆನಪಿಲ್ಲ.

**ಓ ಎಸ್ ನಂ. 72/2017** **ಡಿ.ಡಬ್ಲ್ಯೂ: 1**

2. ದಾವಾಸ್ವತ್ತಿನ ಪಹಣಿ ಇಂದಿಗೂ ವರೆಗೂ 1ನೇ ಪ್ರತಿವಾದಿಯ ಹೆಸರಿನಲ್ಲಿರುತ್ತದೆ. 1ನೇ ಪ್ರತಿವಾದಿಯ ಮಗನಾಗಿ ನನಗೂ ಸಹ ದಾವಾಸ್ವತ್ತಿನ ಮೇಲೆ ಹಕ್ಕು ಅಧಿಕಾರ ಇದೆ. 1ನೇ ಪ್ರತಿವಾದಿಯ ಹೆಸರಿನಲ್ಲಿರುವ ದಾವಾಸ್ವತ್ತಿನ ಮೇಲೆ ನಾನು ಅವರ ಮಗನಾಗಿರುವುದರಿಂದ ಮತ್ತು ಅದು ನನ್ನ ತಾತನ ಆಸ್ತಿಯಾಗಿರುವುದರಿಂದ ನನಗೂ ಸಹ ಹಕ್ಕು , ಅಧಿಕಾರ ಇರುತ್ತದೆ . ಅದರಂತೆ ವಾದಿ , 2 ಮತ್ತು 3 ನೇ ಪ್ರತಿವಾದಿಗಳಿಗೂ ಸಹ ನನ್ನಂತೆಯೇ ದಾವಾಸ್ವತ್ತಿನ ಮೇಲೆ ಹಕ್ಕು , ಅಧಿಕಾರ ಇರುತ್ತದೆ ಎಂದರೆ ಸರಿ .

3. 3 ಮತ್ತು 4 ನೇ ಪ್ರತಿವಾದಿಗಳು ದಾವಾಸ್ವತ್ತಿನ ಮೇಲೆ ಅವರಿಗೆ ಹಕ್ಕು , ಅಧಿಕಾರ ಇರುವುದಿಲ್ಲ ಎಂದು ನನಗೆ ಅಥವಾ 1 ನೇ ಪ್ರತಿವಾದಿಯ ಹೆಸರಿಗೆ ಯಾವುದೇ ದಾಖಲಾತಿಯನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ . ಅದ್ದರಿಂದ 3 ಮತ್ತು 4 ನೇ ಪ್ರತಿವಾದಿಗಳು ಸಹ ನಮ್ಮ ಜೊತೆ ಒಟ್ಟು ಕುಟುಂಬದ ಸದಸ್ಯರಾಗಿ ಇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ವಿಭಾಗ ಆಗಿರುತ್ತದೆ ಎನ್ನುತ್ತಾರೆ . ಸದರಿ ವಿಭಾಗವಾದ ದಿನಾಂಕ ನನಗೆ ನೆನಪಿಲ್ಲ. ನನಗೂ ಮತ್ತು ವಾದಿ ಮತ್ತು 1 ನೇ ಪ್ರತಿವಾದಿಗೂ ಎಂದಿಗೂ ವಿಭಾಗ ಆಗಿರುವುದಿಲ್ಲ ಆದ್ದರಿಂದ ನನಗೆ ದಿನಾಂಕ ಹೇಳಲಾಗುತ್ತಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಮ್ಮ ನಡುವೆ ಪಾರಿಕತ್ ಆಗಿರುತ್ತದೆ ಎನ್ನುತ್ತಾರೆ. ಸದರಿ ಪಾರಿಕತ್ ಗೆ 3 ಮತ್ತು 4 ನೇ ಪ್ರತಿವಾದಿಗಳು ಸಹಿ ಮಾಡಿರುವುದಿಲ್ಲ. ಸದರಿ ಪಾರಿಕತ್ ಆಗಿರುವ ವಿಚಾರ 3 ಮತ್ತು 4 ನೇ ಪ್ರತಿವಾದಿಗೆ ತಿಳಿದಿದೆ. ನಾನು , ವಾದಿ ಅನ್ಯೋನ್ಯವಾಗಿರುತ್ತೇವೆ ಎಂದರೆ ಸರಿ .

**ಮುಂದುವರಿದ ಪಾಟೀಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

ಅಧಿಕ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್ ಸಿ , ಗುಬ್ಬಿ.

Dw.1 is present and is further cross examined by L/c for plaintiffs. For further defendant evidence.

Call on. 21.08.2023.

**ACJ and JMFC., Gubbi**